**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.**

ದಿನಾಂಕಃ 06.05.2026 ಸಾಕ್ಷಿಯನ್ನು ಮಧ್ಯಂತರ ಅರ್ಜಿಯ ಮೇಲೆ ಮಾಡಲಾದ ಆದೇಶದನ್ವಯ ಪುನಃ ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ **ಮುಖ್ಯ ವಿಚಾರಣೆ ಃ** ಅರ್ಜಿದಾರರ ಪರ **ವಕೀಲರಿಂದಃ**

**ನಾನು ಅಂಗನ್ಯೂನತಾ ಪ್ರಮಾಣ ಪತ್ರ, ಡಿಸ್ಚಾರ್ಜ್ ಸಮ್ಮರಿ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-9 ಮತ್ತು 10 ಎಂದು ಗುರುತಿಸಲಾಯಿತು.**

**ಆದ್ದರಿಂದ ನಾನು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.**

ಮುಂದುವರೆದ ಪಾಟೀ ಸವಾಲುಃ **2**ನೇ ಎದುರುದಾರರ ಪರಃ ಶ್ರೀ ಯು ಎಸ್ ಎನ್ ವಕೀಲರಿಂದಃ

ನನಗೆ ನಿಪಿ**9** ದಾಖಲೆಯನ್ನು ವೈದರಾದ ಪ್ರದೀಪ ಕುಮಾರರವರು ಕೊಟ್ಟಿದ್ದಾರೆ**.** ವೈದರಾದ ಪ್ರದೀಪ ಕುಮಾರರವರು ನನಗೆ ಚಿಕಿತ್ಸೆ ಕೊಟ್ಟಿದ್ದರು**.** ನಾನು ಈ ವ್ಯವಹರಣೆಯಲ್ಲಿ ಸಾಕ್ಷ್ಯ ಹೇಳುವ ಮುನ್ನವೇ ನಿಪಿ**9** ದಾಖಲೆಯನ್ನು ವೈದ್ಯರಿಂದ ಪಡೆದಿದ್ದೆನು**.** ನಿಪಿ**9**ರ ದಾಖಲೆಯನ್ನು ಪಡೆಯುವ ಸಲುವಾಗಿ ವೈದ್ಯರಲ್ಲಿಗೆ ನಾನೇ ಹೋಗಿದ್ದೇನೆ**.** ನಿಪಿ**9** ದಾಖಲೆಯನ್ನು ಪಡೆಯುವ ಸಲುವಾಗಿ ವೈದ್ಯರ ಹತ್ತಿರ ಹೋಗಿದ್ದೇನು**.** ವೈದ್ಯರು ನನ್ನನ್ನು ದೈಹಿಕ ಪರೀಕ್ಷೆಗೆ ಒಳಪಡಿಸಿದ್ದರು**.** ವೈದ್ಯರು ನಿಪಿ**9** ದಾಖಲೆ ನೀಡುವ ಪೂರ್ವ ನನ್ನನ್ನು ಯಾವುದೇ ದೈಹಿಕ ಪರೀಕ್ಷೆ ಒಳಪಡಿಸಿಲ್ಲ ಎಂದರೆ ಸರಿಯಲ್ಲ**.** ವೈದ್ಯರು ನಿಪಿ**9**ರಲ್ಲಿ ನಮೂದಿಸಿರುವಂತೆ ನನಗೆ ಯಾವುದೇ ಶಾಶ್ವತ ಅಂಗನ್ಯೂನತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ**.** ವೈದ್ಯರ ಮೇಲೆ ಪ್ರಭಾವ ಬೀರಿ ನಿಪಿ**9** ದಾಖಲೆಯನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ**.**

**ಎಂ.ವಿ.ಸಿ. ನಂಃ 338/2022, P.W.-1**

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು